ಅರ್ಪಿಸಿಕೊಂಡಿದ್ದ ಎಚ್‌ಎಸ್‌ವಿ ಅವರ ಕಾವ್ಯದಲ್ಲಿ ಹಲವು ಮಾದರಿಗಳು ಇದ್ದರೂ ಅವರು ತಮ್ಮದೇ ಮಾದರಿಯನ್ನು ಕಂಡುಕೊಂಡರು ಮತ್ತು ಸತತವಾಗಿ ಅದನ್ನು ಮುರಿದು ಕಟ್ಟುವ ಕೆಲಸ ಮಾಡಿದರು. ಈ ಮುರಿದು ಕಟ್ಟುವಿಕೆಗಾಗಿ ಎಚ್‌ಎಸ್‌ವಿ ನಡೆಸಿದ ಹುಡುಕಾಟದಲ್ಲಿ ಪ್ರಾಚೀನ ಪಠ್ಯಗಳ ಅಧ್ಯಯನ ಮತ್ತು ಅದರ ಸರಳಾನುವಾದ, ವ್ಯಾಖ್ಯಾನಗಳ ಕೊಡುಗೆಯು ಮುಖ್ಯವಾದುದು. ಪಂಪನ 'ಆದಿಪುರಾಣ ತಿಳಿಗನ್ನಡ ಅವತರಣ' ಪುಸ್ತಕವನ್ನು ಅವರು ನನಗೆ ಕಳುಹಿಸಿ ಕೊಟ್ಟಾಗ ನಾನು ಕೇಳಿದ್ದೆ, 'ಹೀಗೆ ಹಳೆಗನ್ನಡದ ಪಠ್ಯಗಳನ್ನು ಸಮಕಾಲೀನ ಭಾಷೆಗೆ ಅನುವಾದಿಸೋ ಕೆಲಸವು ನನಗೆ ಕನ್ನಡಕ್ಕೆ ಕನ್ನಡವನ್ನೇ ಮುಖಾಮುಖಿಯಾಗಿಸುವುದು ಅನ್ನಿಸುತ್ತೆ... ಈಗಾಗಲೇ ಆದಿಪುರಾಣದ ಸರಳ ಅವತರಣಿಕೆ ಕನ್ನಡದಲ್ಲಿ ಬಂದಿದೆ. ಆದರೂ ನೀವು ಪುನಃ ಯಾಕೆ ಮಾಡಿದಿರಿ?' ಅಂತ. ಅವರು ಹೇಳಿದರು, 'ಹೌದು, ನೀನು ಹೇಳೋದು ಸರಿ... ನೋಡು, ಒಂದು ಕೃತಿಯನ್ನು ಓದೋದು ಬೇರೆ, ಅನುವಾದ ಮಾಡುವಾಗಿನ ಅದರ ತಿಳಿವಳಿಕೆಗಳು ಬೇರೆ ಆಗುತ್ತೆ. ಹೀಗೆ ಮಾಡಿದಾಗ ನಮಗೆ ದೊಡ್ಡ ಭಾಷಾಜಗತ್ತು, ದೊಡ್ಡ ಭಾವಜಗತ್ತು ಸಿಗುತ್ತೆ. ಇದನ್ನು ಓದುತ್ತ ಇದ್ದರೆ ಬೇರೆ ಬೇರೆ ಚಿಂತನೆಗಳು, ಹೋಲಿಕೆಗಳು ಕಾಣೋಕೆ ಶುರು ಆಗುತ್ತೆ. ನೀನು ಏನೇ ಹೇಳು... ನಮ್ಮ ಬದುಕು ಅನ್ನೋದು ಸೀಮಿತ ಅನುಭವ ಪ್ರಪಂಚ. ಹೊಸಹೊಸದನ್ನು ಅಧ್ಯಯನ ಮಾಡದೆ ಹೋದರೆ ಹೊಸದು ನಮಗೆ ಸಿಗಲ್ಲ. ನಮ್ಮ ಭಾವಲೋಕ ವಿಸ್ತರಿಸಬೇಕು ಅಂದ್ರೆ ನಾವು ಬೇರೆ ಪ್ರಪಂಚ ನೋಡಬೇಕಲ್ಲಮ್ಮ? ಅದಕ್ಕಾಗಿ ನಮಗೆ ಪ್ರಿಯವಾದ ಜಗತ್ತನ್ನು ಹುಡುಕಿಕೊಂಡು ಹೋಗಬೇಕು... ಬೇಂದ್ರೆ, ಕುವೆಂಪು, ಅಡಿಗರು ಈ ಆರ್ಷೇಯ ಪರಂಪರೆಯನ್ನು ಹೇಗೆ ಸೂರೆಗೊಂಡಿದ್ದಾರೆ ಅನ್ನೋದು ಇದನ್ನ ಓದುತ್ತ ಹೋದರೆ ತಿಳಿಯುತ್ತೆ. ನೋಡಮ್ಮಾ... ಹಳೆಯ ಪಠ್ಯಗಳನ್ನು ಪ್ರತಿಯೊಬ್ಬರೂ ಓದುವ ಬಗೆ ಬೇರೆ ಆಗುತ್ತೆ. ಪ್ರತಿಯೊಬ್ಬರ ಮನಸ್ಸಿನ ಕಲ್ಪನಾಸಾಧ್ಯತೆಗಳು, ಅನುಭವವನ್ನು ಒಳಗೊಳ್ಳುವ ಜೀರ್ಣಕಾರಿ ಗುಣವೂ ಬೇರೆಬೇರೆಯದ್ದಾಗಿರುತ್ತೆ. ನನ್ನದೊಂದು ಭಾವಲೋಕ ಇದೆ. ಮತ್ತೊಂದು ಕೃತಿಯನ್ನು ಓದುವುದು ಅಂದರೆ ಮತ್ತೊಂದು ಭಾವಲೋಕವನ್ನು ಒಳಗೊಳ್ಳುವುದು ಅಂತ. ಪ್ರತಿಯೊಂದು ಲೋಕವೂ ಇನ್ನೊಂದು ದೊಡ್ಡ ಲೋಕವನ್ನು ಮುಖಾಮುಖಿಯಾಗಬೇಕು. ನಮ್ಮನಮ್ಮ ಯೋಗ್ಯತೆಗೆ ಅನುಸಾರ ಅದನ್ನು ಅರ್ಥಮಾಡಿಕೊಳ್ಳುತ್ತೇವೆ. ಆಗ ನಮ್ಮ ಲೋಕ ದೊಡ್ಡದಾಗುತ್ತೆ. ನಮ್ಮ ಸೀಮಿತ ಅನುಭವದ ಮೂಲಕವೇ ಆದರೂ ಇನ್ನೊಂದನ್ನು ಅರ್ಥಮಾಡಿಕೊಳ್ಳಬೇಕು. ಮತ್ಯಾರೋ ದೊಡ್ಡ ಲೇಖಕ ಇದೇ ಪಠ್ಯವನ್ನ ವಿಶ್ಲೇಷಣೆಗೆ ಒಳಪಡಿಸಿದರೆ ಮೂಲ ಪಠ್ಯದಲ್ಲಿ ಇನ್ನೂ ಜಿಗಿತ ಕಾಣಬಹುದು. ಹಾಗಂತ ಯಾರೋ ಮಾಡಲಿ ಅಂತ ನಾನು ಸುಮ್ಮನೆ ಕೂರಲು ಆಗಲ್ಲ. ನನಗೆ ಕಂಡಷ್ಟನ್ನು ನಾನು ಮಾಡಲೇಬೇಕು' ಅಂದಿದ್ದರು.

ತಾನು ನಡೆವ/ದ ದಾರಿಯಲ್ಲಿ ಮನಸ್ಸು 'ತೊಡಗುವುದರಿಂದ ಪಡೆಯುವ ಅನುಭವಗಳ 'ದತ್ತಾಂಶ'ಗಳೇ ತನ್ನ ಬದುಕು ಮತ್ತು ಬರಹದ 'ಮಾರ್ಗ' ಎಂದು ನಂಬಿದ್ದವರು ಎಚ್‌ಎಸ್‌ವಿ. ಇದನ್ನೇ ಅವರು 'ಆಗುವಿಕೆ' ಅನ್ನುತ್ತಾರೆ. 'ತನ್ನ ಮಾತೆಲ್ಲ ಕವಿತೆಯೇ ಎನ್ನುವ ಬೇಂದ್ರೆ' ಮತ್ತು 'ಕವಿತೆ ಮಾತ್ರ ನನ್ನ ಮಾತು ಅನ್ನುವ ಅಡಿಗ' – ಎಂಬ ಎರಡು ಬಗೆಯ ಕವಿಗಳನ್ನು ಎಚ್‌ಎಸ್‌ವಿ ಗುರುತಿಸುತ್ತ, 'ಬೇಂದ್ರೆಯ ಇರುವಿಕೆಯ ಸ್ಥಿತಿಗಿಂತ ಅಡಿಗರ ಆಗುವಿಕೆಯ ಗತಿ ಸಾಧಕರಿಗೆ ತೆರೆದಿರುವ ಮಾರ್ಗವೆಂದು ನಾನು ನಂಬಿದ್ದೇನೆ' ಎಂದು ಬರೆದವರು.

* * *

ಕನ್ನಡ ಕಾವ್ಯದ ಹಲವು ನೆಲೆಗಳನ್ನು ಅದರ ಸಮಗ್ರತೆಯಲ್ಲಿ– ಆಶಯ, ಆಕೃತಿ, ಭಾಷೆ ಮತ್ತು ಲಯದಲ್ಲಿ– ಅಳವಡಿಸಿಕೊಂಡ ಕೆಲವೇ ಕೆಲವು ಆಧುನಿಕ ಕವಿಗಳಲ್ಲಿ ಎಚ್‌ಎಸ್‌ವಿ ಅವರು ಒಬ್ಬರು. ಈ ವಿಷಯದಲ್ಲಿ ಅವರು ಪಕ್ಷಪಾತವಿಲ್ಲದಂತೆ ಕನ್ನಡ ಕಾವ್ಯ ಪರಂಪರೆಯ ಎಲ್ಲರಿಂದಲೂ ಒಳ್ಳೆಯ ಅಂಶಗಳನ್ನು ಪಡೆದರು. ವಸ್ತು, ಭಾಷೆ ಮತ್ತು ರಂಜನೆಗಳೆಂಬ ಮೂರು ನೆಲೆಗಳಲ್ಲಿ ಮೈತಳೆದ ಅವರ ಮಕ್ಕಳ ಕವಿತೆಗಳು 'ಕೇವಲ' ಮಕ್ಕಳ ಕವಿತೆಯಲ್ಲ, ಹಾಡುಗುಣದ ಅದರ ಶಕ್ತಿಯು ಎಲ್ಲರೂ ಓದಬೇಕಾದ ಕವಿತೆಗಳು. ಬುದ್ಧನ ಕುರಿತ ಮಹಾಕಾವ್ಯ ಮತ್ತು ಖಂಡಕಾವ್ಯ ರಚನೆಗಳು ಅವರ ಕಲ್ಪನಾಶಕ್ತಿಗೆ ನೀಡಿದ